THE TIMES OF INDIA

Online Newspaper Clipping Service

Dtd-Thursday, 28th, June- 2018

Page No. 07

# Govt seeks feedback on draft law to replace UGC

Manash.Gohain
@timesgroup.com



**New Delhi:** The Central government uploaded on Wednesday a draft law on replacing the higher education regulatory authority, University Grants Commission, with a new regulator and sought feedback from various stakeholders.

The proposed regulatory authority will be freed of funding activities and will focus solely on academic matters. Funding and grants will be dealt with directly by the ministry of human resource development.

The draft law, called the Higher Education Commission of India Act, 2018 (Repeal of University Grants Commission Act), has been uploaded on the HRD ministry website and will be available for comment and suggestion till 5pm on July 7.

The proposed panel will have powers to enforce academic quality standards and to order the closure of substandard and bogus institutions. Non-compliance could result in fines or jail sentences, says the draft law.

"The chief executive and other members of management of such institution who do not comply with the penalty imposed by the commission shall be liable for prosecution as per procedure laid down under the Criminal Procedure Code and may be punished with imprisonment for a term which may extend up to three years," the draft says.

Announcing the availability of the draft for public feedback, Union HRD minister **Prakash Javadekar** tweeted, "In a landmark decision, a draft Act for repeal of #UGC & setting up #HECI (Higher Education Commission of India) has been prepared. The draft Act is in accordance with the commitment of govt for reforming the regulatory systems that provide more autonomy to HE institutes to promote excellence & facilitate holistic growth of the education system (sic)."

DECCAN HERALD

# UGC to make way for Higher Education Commission

## Body will have powers to close substandard institutions

**NEW DELHI, DHNS: The Centre has moved in to replace the University Grants Commission (UGC) with a new regulatory body which would have powers to "enforce" compliance with its regulatory provisions and order closure of "substandard and bogus" institutions.**

Non-compliance with the directives or regulations of the proposed Higher Education Commission of India (HECI) by any university or college would result in slapping of fine.

On failure to deposit the fine, heads and members of the management of such institutions would be liable for prosecution under the Code of Criminal Procedure (CrPC), which may lead to a maximum three years imprisonment.

The Human Resource Development (HRD) Ministry has come up with a draft bill to repeal the UGC Act 1956 and establish the HECI. The move is aimed at improving the academic standards in the country's higher education sector.

The HECI (Repeal of University Grants Commission Act, 1956) Bill, 2018 will be applicable to all universities, set up under a law by Parliament or State legislature, and the institutions which have been granted deemed-to-be-university status.

An Overseas Citizen of India (OCI) having requisite qualifications can be appointed as the chairman of the proposed HECI, apart from any other eligible Indian citizen, according to the draft bill.

The central government will appoint the HECI chairman, vice chairman and 12 other members.

The Cabinet Secretary will head the search-cum-selection committee for recommending a panel of names for the post of HECI chairman. The same committee will also recommend a panel of names for the appointment of the vice chairman. This committee will have HECI chairperson as its member.

Human Resource Development minister Prakash Javadekar on Wednesday invited comments and suggestions from all educationists and other stakeholders on the draft bill, by July 7, 2018, 5 pm.

Secretaries of the HRD ministry's higher education department, Skill Development and Entrepreneurship ministry and Department of Science and Technology will be the members of the HECI, representing the central government.

The chairmen of All India Council for Technical Education and national Council for Teacher Education will also be members. Two members of the HECI will be the heads of accreditation bodies.

The 14-member HECI will also have two serving vice chancellors of reputed universities, two serving professors and "one doyen of Industry" as its members.

SDUAHER

# ನಾಳೆ ಮಧುಮೇಹ ಚಿಕಿತ್ಸಾ ಸಮ್ಮೇಳನ

• **ಕನ್ನಡಪ್ರಭ ವಾರ್ತೆ** ಕೋಲಾರ

ನಗರದ ಶ್ರೀದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ ಜೂ.29ರ ಬೆಳಗ್ಗೆ 8.30ಕ್ಕೆ ಸಮನ್ವಯ-2018 ಸಮ್ಮೇಳನವನ್ನು ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪಕುಲಪತಿ ಡಾ.ಸಿ.ವಿ.ರಘುವೀರ್ ಹೇಳಿದರು.

ನಗರದ ಪತ್ರಕರ್ತಕರ ಭವನದಲ್ಲಿನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮ್ಮೇಳದಲ್ಲಿ ಸಮಗ್ರ ಮಧುಮೇಹ ಚಿಕಿತ್ಸಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಇದರಲ್ಲಿಮಧುಮೇಹ ಚಿಕಿತ್ಸಾ ಪರಿಣಿತರು ಪಾಲ್ಗೊಳ್ಳುವರು. ಮಧುಮೇಹಿಗಳ ಜೀವನ ಶೈಲಿಯಲ್ಲಿ ಬದಲಾವಣೆಯ ಕ್ರಮಗಳನ್ನು ತಿಳಿಸಿ ಕೊಡಲಿದ್ದಾರೆ ಎಂದರು.

ಆಯುಷ್, ಯೋಗಾ, ಯೂನಾನಿ, ಆಯುರ್ವೇದ ಸೇರಿದಂತೆ ಇತರೆ ಚಿಕಿತ್ಸಾಕ್ರಮಗಳನ್ನುತಿಳಿಸಿಕೊಡಲಿದ್ದು, ಆರೋಗ್ಯ ಸಮಾಜ ನಿರ್ಮಾಣದ ವಿಧವನ್ನು ಬೋಧಿಸಲಿದ್ದಾರೆ. ತಮಗೆ ಅನುಕೂಲ ಆಗುವ ವಿಧಾನವನ್ನು ಪಾಲಿಸುವಮೂಲಕಮಧುಮೇಹವನ್ನು ನಿಯಂತ್ರಿಸಿ ಮುಂದೆ ಉಂಟಾಗಬಹುದಾದ ಅನಾಹುತಗಳನ್ನು ನಿಯಂತ್ರಿಸುವ ಕ್ರಮಗಳನ್ನು ತಿಳಿಸುವರು ಎಂದರು.



ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಸಿ.ವಿ.ರಘುವೀರ್.

ಮಧುಮೇಹ ಚಿಕಿತ್ಸಾ ಪರಿಣಾ ತರಾದ ಡಯಾಬೀಟಿಸ್ ಎಂಡೋಕಾರಿನೋಲಾಜಿ ವಿಭಾದ ವೈದ್ಯಕೀಯ ನಿರ್ದೇಶಕ ಡಾ.ಎಸ್. ಎಸ್. ಶ್ರೀಕಂಠಯ್ಯ ಕಾರ್ಯಕ್ರಮವನ್ನು ಉದ್ಘಾಟಿಸುವರು, ಪಾಂಡಿಚೆರಿಯ ಬಾಲಜಿ ವಿದ್ಯಾಪೀಠ ನಿರ್ದೇಶಕ ಡಾ. ಅನಂದ್ ಬಾಲಾಯೋಗಿ, ದಕ್ಷಿಣಾ ಕನ್ನಡದ ಶುಶೃತಾ ಆಯುರ್ವೇದ ಆಸ್ಪತ್ರೆಯ ಡಾ.ರವಿಶಂಕರ್ ಪರ್ವೇಜಿ, ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಯ ನಿರ್ದೇಶಕ ಡಾ.ಜಿ.ಜಿ. ಗಂಗಾದರಮ್ ಉಪಾನ್ಯಾಸ ನೀಡಲಿದ್ದಾರೆ ಎಂದರು.

ಆರ್.ಎಲ್. ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ ಮಾತನಾಡಿ, ಭಾರತದಲ್ಲಿ ಅತಿಹೆಚ್ಚ ಸಂಖ್ಯೆಯಲ್ಲಿ ಮಧುಮೇಹಿಗಳು ಇದ್ದಾರೆ. ಈ ಸಂಖ್ಯೆಯು ವರ್ಷದಿಂದ ವರ್ಷಕ್ಕೆಏರಿಕೆಯಾಗುತ್ತಲೇಇರುವುದು ಆತಂಕಕಾರಿ ಸಂಗತಿ. ಮಧುಮೇಹದಿಂದ ಶೇ.50ಕ್ಕೂ ಹೆಚ್ಚು ಅಂಗಾಂಗಗಳು ನಾಶವಾಗಲಿದೆ. ಮುಖ್ಯವಾಗಿ ರಕ್ತನಾಶಗಳು ನಾಳವಾಗಿ ಮನುಷ್ಯನನ್ನು ಚಿಂತಾಜನಕ ಸ್ಥಿತಿಗೆ ದೂಡಲಿದೆ ಎಂದರು.

ಮಧುಮೇಹ ಕಾಯಿಲೆಯೂ ಬಹಳಷ್ಟು ಜನಕ್ಕೆ ತಿಳಿಯುವುದೇ ಇಲ್ಲ. ಇದನ್ನು ಸೈಲೆಂಟ್ ಕಿಲ್ಲರ್ ಎನ್ನುತ್ತಾರೆ. ಮಧುಮೇಹ ಕಾಯಿಲೆಯನ್ನು ಗುರುತಿಸುವ ವೇಳೆಗೆ ಬಹಳಷ್ಟು ಗಂಭೀರ ಸ್ಥಿತಿಯನ್ನು ತಲುಪಿರುತ್ತೇವೆ. ಈ ಕಾಯಿಲೆ ಬಾರದಂತೆ ಪ್ರತಿಯೊಬ್ಬರು ಫ್ರೀ ಡಯಾಬಿಟಿಸ್ ಹಂತದಲ್ಲೇ ಮುಂಜಾಗ್ರತೆ ಪಡೆದುಕೊಳ್ಳುವುದು ಅತ್ಯಗತ್ಯ ಎಂದರು.

ಈ ಕಾಯಿಲೆಯನ್ನು ವಾಸಿ ಮಾಡಲಾಗದಿದ್ದರೂ ನಿಯಂತ್ರಿಸುವ ಹಲವು ವಿಧಾನಗಳನ್ನು ಅಲವಡಿಸಿಕೊಂಡು ಮುಂದೆ ಉಂಟಾಗಬಹುದಾದ ಅನಾಹುತಗಳನ್ನು ತಡೆಗಟ್ಟುವ ದೆಸೆಯಲ್ಲಿ ಸಾರ್ವಜನಿಕರಿಗೆ ಈ ಸಮ್ಮೇಳನವು ಪೂರಕವಾಗಲಿದೆ ಎಂದರು.

ಡಾ.ಪ್ರಭಾಕರ್ ಮಾತನಾಡಿ, ನಾವು ತೆಗೆದುಕೊಳ್ಳುವ ಆಹಾರ ಕ್ರಮದಿಂದ ನಾವು ಪಡುವ ದೈಹಿಕ ಶ್ರಮದವರೆಗೂ ಈ ಕಾಯಿಲೆ ನಿಯಂತ್ರಿಸ ಬಹುದಾಗಿದೆ. ಯೋಗಾ, ನೈಸರ್ಗಿಕ, ಆಯುರ್ವೇದ ಇತ್ಯಾದಿ ಚಿಕಿತ್ಸಾ ವಿಧಾನದಲ್ಲಿ ಮುಖ್ಯವಾಗಿ ನಮಗೆ ಆತ್ಮವಿಶ್ವಾಸ ಅಗತ್ಯ ಎಂದರು.

ಗ್ರಾಮೀಣಾ ಪ್ರದೇಶಕ್ಕಿಂತಾ ನಗರ ಪಟ್ಟಣಗಳಲ್ಲಿ ಮಧುಮೇಹಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಹಿಂದಿನ ದೈಹಿಕ ಶ್ರಮದ ಬದುಕು ಈಗ ಇಲ್ಲ. ಬಹಳಷ್ಟು ಬದಲಾವನೆಗಳಿಂದ ಐಷ್ಯರಾಮ ಜೀವನಕ್ಕೆ ಹೊಂದಿ ಕೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಆಹಾರ ಪದ್ಧತಿಗಳು ಬಹಳಷ್ಟು ಬದಲಾವಣೆಯಿಂದ ಮಧುಮೇಹ ರೋಗವು ಹೆಚ್ಚಾಗಲು ಕಾರಣವಾಗಿದೆ ಎಂದು ವಿವರಿಸಿದರು.

ಹೊಸ ವ್ಯವಸ್ಥೆ | ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪನೆಗೆ ತಯಾರಿ | ಕರಡು ಕಾಯ್ದೆ ಪ್ರಕಟಿಸಿದ ಮಾನವ ಸಂಪನ್ಮೂಲ ಸಚಿವಾಲಯ

# ಯುಜಿಸಿಯನ್ನೇ ರದ್ದು ಮಾಡಲು ಕೇಂದ್ರ ಸಜ್ಜು

ನವದೆಹಲಿ: ಅಧಿಕಾರಕ್ಕೆ ಬರುತ್ತಿದ್ದಂತೆ ನೆಹರು ಕಾಲದ ಯೋಜನಾ ಆಯೋಗವನ್ನು ರದ್ದುಗೊಳಿಸಿ ನೀತಿ ಆಯೋಗ ಅಸ್ತಿತ್ವಕ್ಕೆ ತಂದಿದ್ದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದೀಗ ವಿಶ್ವವಿದ್ಯಾಲಯ ಧನ ಸಹಾಯ (ಯುಜಿಸಿ) ರದ್ದುಗೊಳಿಸಿ ಹೊಸ ಸಂಸ್ಥೆ ಸೃಷ್ಟಿಸಲು ಮುಂದಾಗಿದೆ.

'ಇನ್‌ಸ್ಪೆಕ್ಷನ್ ರಾಜ್' ಅನ್ನು ಅಂತ್ಯಗೊಳಿಸುವ ಉದ್ದೇಶದೊಂದಿಗೆ ಯುಜಿಸಿಯನ್ನು ರದ್ದುಗೊಳಿಸಿ ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. 1956ರ ಯುಜಿಸಿ ಕಾಯ್ದೆ ರದ್ದುಗೊಳಿಸಿ, ಉನ್ನತ ಶಿಕ್ಷಣ ಆಯೋಗ ಸ್ಥಾಪನೆ ಸಂಬಂಧ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ತನ್ನ ವೆಬ್‌ಸೈಟ್‌ನಲ್ಲಿ ಬುಧವಾರ ಸಂಜೆ ಕರಡು ಕಾಯ್ದೆಯನ್ನು ಪ್ರಕಟಿಸಿದೆ.

ಯುಜಿಸಿ ರೀತಿ ಅನುದಾನ ಹಂಚಿಕೆ ಮಾಡುವ ಬದಲು ಉದ್ದೇಶಿತ ಉನ್ನತ ಶಿಕ್ಷಣ ಆಯೋಗ ಶೈಕ್ಷಣಿಕ ವಿಷಯಗಳ ಬಗ್ಗೆಯಷ್ಟೇ ಗಮನಹರಿಸಲಿದೆ. ಅನುದಾನ ಕುರಿತ ವಿಷಯಗಳು ಮಾನವ ಸಂಪನ್ಮೂಲ ಸಚಿವಾಲಯಕ್ಕೆ ಹಸ್ತಾಂತರಗೊಳ್ಳಲಿವೆ. ಶೈಕ್ಷಣಿಕ ಗುಣಮಟ್ಟ ಸುಧಾರಣೆ, ಶೈಕ್ಷಣಿಕ ಸಂಸ್ಥೆಗಳ ಕಾರ್ಯನಿರ್ವಹಣೆ ಪರಿಶೀಲನೆ, ಪ್ರೋತ್ಸಾಹ, ಶಿಕ್ಷಕರಿಗೆ ತರಬೇತಿ, ಶೈಕ್ಷಣಿಕ ತಂತ್ರಜ್ಞಾನಗಳ ಬಳಕೆಗೆ ಉತ್ತೇಜನದಂತಹ ವಿಷಯಗಳ ಬಗ್ಗೆ ಆಯೋಗ ಒತ್ತು ನೀಡಲಿದೆ.

ಕರಡು ಕಾಯ್ದೆ ಕುರಿತಂತೆ ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಸಾರ್ವಜನಿಕರು ಜು.7ರ ಸಂಜೆ 5ರೊಳಗೆ ತಮ್ಮ ಅಭಿಪ್ರಾಯ ತಿಳಿಸಬಹುದಾಗಿದೆ. ಅಭಿಪ್ರಾಯ ಸಂಗ್ರಹದ ಬಳಿಕ ಅಗತ್ಯ ಬಿದ್ದರೆ ತಿದ್ದುಪಡಿ ಮಾಡಿ ಅದನ್ನು ಮುಂಬರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲೇ ಮಂಡಿಸುವ ಇರಾದೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಯುಜಿಜಿ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕುರಿತು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಕಳೆದ ಬಜೆಟ್‌ನಲ್ಲಿ ಮಾಹಿತಿ ನೀಡಿದ್ದರು.

ನಿಯಂತ್ರಣಾ ವ್ಯವಸ್ಥೆಯಲ್ಲಿನ ಸುಧಾರಣೆ ತರುವುದು. ಈ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತೆ ನೀಡುವ ಮತ್ತು ತನ್ಮೂಲಕ ಶೈಕ್ಷಣಿಕ ವಲಯದಲ್ಲಿ ತ್ವರಿತ ಮತ್ತು ಅತ್ಯುತ್ತಮ ಪ್ರಗತಿಗೆ ಒತ್ತು ನೀಡುವ ಸರ್ಕಾರದ ಆಶಯದಂತೆ ಈ ಕರಡು ಕಾಯ್ದೆ ರಚಿಸಲಾಗಿದೆ. ಇದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಐತಿಹಾಸಿಕ ನಿರ್ಧಾರ ಎಂದು ಕರಡು ಕಾಯ್ದೆ ಕುರಿತು ಕೇಂದ್ರ ಮಾನವ ಸಂಪನ್ಮೂಲ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಪ್ರತಿಕ್ರಿಯೆ ನೀಡಿದ್ದಾರೆ.

## ಯುಜಿಸಿ ರದ್ದು ಏಕೆ?

ಹಾಲಿ ವ್ಯವಸ್ಥೆಯಲ್ಲಿ ಯುಜಿಸಿ, ಶೈಕ್ಷಣಿಕ ಗುಣಮಟ್ಟ ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವ ಕ್ರಮಗಳ ಬಗ್ಗೆ ಗಮನ ಹರಿಸುವುದಕ್ಕಿಂತ ಹೆಚ್ಚಿನ ಗಮನ ಕೇವಲ ಅನುದಾನ ಹಂಚಿಕೆ ಸೇರಿದಂತೆ ಇತರೆ ಕೆಲಸಗಳಿಗೆ ಸೀಮಿತ ಆಗಿದೆ. ಇದರಿಂದಾಗಿ ಶೈಕ್ಷಣಿಕ ವಲಯಕ್ಕೆ ಸಿಗಬೇಕಾದ ಅಗತ್ಯ ಒತ್ತು ಸಿಗುತ್ತಿಲ್ಲ ಎಂಬ ಆರೋಪವಿದೆ. ಈ ದೂರನ್ನು ಪರಿಹರಿಸಿ ಹೊಸ ವ್ಯವಸ್ಥೆ ರಚಿಸುವ ನಿಟ್ಟಿನಲ್ಲಿ ಯುಜಿಸಿ ರದ್ದು ಮಾಡಲು ಕೇಂದ್ರ ಸರ್ಕಾರದ ಪ್ರಸ್ತಾಪ.

## ಹೊಸ ವ್ಯವಸ್ಥೆ ಏನು?

ಯುಜಿಸಿ ಬದಲು ರಚನೆಯಾಗುವ ಭಾರತೀಯ ಉನ್ನತ ಶಿಕ್ಷಣ ಆಯೋಗ, ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ವಿವಿಧ ನಿಯಂತ್ರಣಾ ವ್ಯವಸ್ಥೆಯ ಹಸ್ತಕ್ಷೇಪ ಕಡಿಮೆ ಮಾಡಲಿದೆ. ಈ ಮೂಲಕ ಅವುಗಳ ತ್ವರಿತ ಬೆಳವಣಿಗೆ ಅವಕಾಶ ಮಾಡಿಕೊಡಲಿದೆ. ಅನುದಾನ ಹಂಚಿಕೆಯಂಥ ಕೆಲಸದ ಬದಲು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು ಮತ್ತು ಅವುಗಳ ಶೈಕ್ಷಣಿಕ ಗುಣಮಟ್ಟ ಕಾಪಾಡುವ ಕೆಲಸ ಮಾಡಲಿದೆ ಎಂಬ ಚಿಂತನೆ ಕೇಂದ್ರದ್ದು.

ಪ್ರಜಾವಾಣಿ



# ವೈದ್ಯಕೀಯ ಯಂತ್ರಗಳು ಔಷಧ ವ್ಯಾಪ್ತಿಗೆ

# ಎಂಆರ್‌ಐ, ಸಿಟಿ ಸ್ಕ್ಯಾನ್ ಶುಲ್ಕ ನಿಯಂತ್ರಣಕ್ಕೆ ಕ್ರಮ?

ಪ್ರಜಾವಾಣಿ ವಾರ್ತೆ



ಎಂಆರ್‌ಐ ಸ್ಕ್ಯಾನ್

ನವದೆಹಲಿ: ಗುಣಮಟ್ಟದ ಮೇಲೆ ನಿಗಾ ಮತ್ತು ದುಬಾರಿ ಶುಲ್ಕ ನಿಯಂತ್ರಿಸಲು ಎಕ್ಸ್‌ರೇ, ಎಂಆರ್‌ಐ ಮತ್ತು ಸಿ.ಟಿ ಸ್ಕ್ಯಾನ್‌ನಂತಹ ಎಂಟು ಬಗೆಯ ವೈದ್ಯಕೀಯ ಯಂತ್ರೋಪಕರಣಗಳನ್ನು 'ಔಷಧ'ಗಳ ವ್ಯಾಪ್ತಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ.

ಚಿತ್ರ ಸೆರೆ ಹಿಡಿಯುವ ಎಲ್ಲ ಬಗೆಯ ವೈದ್ಯಕೀಯ ಯಂತ್ರೋಪಕರಣ, ಹೃದಯದಲ್ಲಿ ಅಳವಡಿಸುವ ಪೇಸ್ ಮೇಕರ್, ಡಯಾಲಿಸಿಸ್ ಯಂತ್ರಗಳನ್ನು ಔಷಧಗಳ ಪಟ್ಟಿಗೆ ಸೇರಿಸುವ ಪ್ರಸ್ತಾಪವನ್ನು ಕೇಂದ್ರ ಔಷಧ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆ ಮುಂದಿಟ್ಟಿದೆ.

ಆಸ್ಪತ್ರೆಗಳು ಮತ್ತು ರೋಗಪತ್ತೆ ವೈದ್ಯಕೀಯ ಕೇಂದ್ರಗಳು ಬೇಕಾಬಿಟ್ಟಿಯಾಗಿ ರೋಗಿಗಳಿಂದ ಹಣ ಸುಲಿಯುವ ಪ್ರವೃತ್ತಿಗೆ ಭವಿಷ್ಯದಲ್ಲಿ ಕಡಿವಾಣ ಬೀಳಲಿದೆ ಎಂದು ನಿರೀಕ್ಷಿಸಲಾಗಿದೆ.

ಹೃದಯದಲ್ಲಿ ಅಳವಡಿಸುವ ಸ್ಟೆಂಟ್ ಮತ್ತು ಕೃತಕ ಮಂಡಿಚಿಪ್ಪುಗಳ ಗರಿಷ್ಠ ಮಾರಾಟ ಬೆಲೆ ಮಿತಿ ನಿಗದಿಗೊಳಿಸಿದ ನಂತರ ಸರ್ಕಾರ ಕೈಗೊಂಡ ಮಹತ್ವದ ನಿರ್ಧಾರ ಇದಾಗಿದೆ.

ಈ ಸಂಬಂಧ ಕೇಂದ್ರ ಔಷಧ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆ ಕಳೆದ ಶುಕ್ರವಾರ 'ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ–1940' ಅಡಿ ಸುತ್ತೋಲೆ ಹೊರಡಿಸಿದ್ದು, ಸಾರ್ವಜನಿಕರಿಂದ ಸಲಹೆ, ಸೂಚನೆ ಆಹ್ವಾನಿಸಿದೆ.

ದುಬಾರಿ ವೈದ್ಯಕೀಯ ಸಾಧನಗಳು 'ಔಷಧಗಳ ಪಟ್ಟಿ'ಗೆ ಸೇರಿದರೆ ಅವುಗಳ ಬೆಲೆ ಮತ್ತು ಗುಣಮಟ್ಟಗಳ ಮೇಲೆ ಔಷಧ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆ ಹಿಡಿತ ಹೊಂದಿರುತ್ತದೆ.

# 29ಕ್ಕೆ ಮಧುಮೇಹ ರಾಷ್ಟ್ರೀಯ ಸಮ್ಮೇಳನ

ಕೋಲಾರ: 'ಮಧುಮೇಹದ ಸಂಬಂಧ ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಜೂನ್ 29ರಂದು ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ' ಎಂದು ದೇವರಾಜ ಅರಸು ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಮಧುಮೇಹ ಕಾಯಿಲೆಯು ಸಾಕಷ್ಟು ಜನರನ್ನು ಬಾಧಿಸುತ್ತಿದೆ. ಈ ಕಾಯಿಲೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ. ಜನರ ಜೀವನ ಶೈಲಿ ಬದಲಾದರೆ ಕಾಯಿಲೆ ಹತೋಟಿಗೆ ಬರುತ್ತದೆ' ಎಂದರು.

'ಸಮ್ಮೇಳನದಲ್ಲಿ ನೂರಾರು ತಜ್ಞರು ಭಾಗವಹಿಸುತ್ತಾರೆ. ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್.ಶ್ರೀಕಂಠ ಅತಿಥಿಯಾಗಿ ಭಾಗವಹಿಸುತ್ತಾರೆ. ದೇವರಾಜಅರಸುವೈದ್ಯಕೀಯಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್ ಅಧ್ಯಕ್ಷತೆ ವಹಿಸುತ್ತಾರೆ' ಎಂದರು.

'ಭಾರತ ಹಾಗೂ ಚೀನಾ ದೇಶದಲ್ಲಿ ಮಧುಮೇಹದಿಂದ ಬಳಲುತ್ತಿರುವವರು ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಈ ಕಾಯಿಲೆ ತಡೆಗೆ ಜೀವನ ಶೈಲಿ ಮತ್ತು ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು' ಎಂದು ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ ಸಲಹೆ ನೀಡಿದರು.

ಸಂಸ್ಥೆಯ ವೈದ್ಯ ಡಾ.ಪ್ರಭಾಕರ್ ಹಾಜರಿದ್ದರು.

SDUAHER

# ಯುಜಿಸಿ ಬದಲು ರಾಷ್ಟ್ರೀಯ ಶಿಕ್ಷಣ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣ ಕ್ಷೇತ್ರ ನಿಯಂತ್ರಣಕ್ಕೆ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಬದಲಿಗೆ ಹೊಸ ಸಂಸ್ಥೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ನಿಯಮಗಳನ್ನು ಅನುಸರಿಸುವಂತೆ ಆದೇಶಿಸುವ ಮತ್ತು ಕಳಪೆ ಗುಣಮಟ್ಟದ ಹಾಗೂ ನಕಲಿ ಸಂಸ್ಥೆಗಳನ್ನು ಮುಚ್ಚಿಸುವ ಅಧಿಕಾರವನ್ನು ಪ್ರಸ್ತಾವಿತ ಸಂಸ್ಥೆಗೆ ನೀಡಲು ಉದ್ದೇಶಿಸಲಾಗಿದೆ.

ಪ್ರಸ್ತಾವಿತ ಸಂಸ್ಥೆಗೆ ಭಾರತೀಯ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ) ಎಂದು ಹೆಸರು ಇರಿಸಲಾಗುವುದು. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ನಿಯಮ ಮತ್ತು ನಿರ್ದೇಶನಗಳನ್ನು ಅನುಸರಿಸದೆ ಇದ್ದರೆ ದಂಡ ವಿಧಿಸುವ ಅಧಿಕಾರ ಈ ಆಯೋಗಕ್ಕೆ ಇರಲಿದೆ.

ದಂಡ ಕಟ್ಟದೇ ಇದ್ದರೆ ಅಂತಹ ಸಂಸ್ಥೆಗಳ ಮುಖ್ಯಸ್ಥರು ಮತ್ತು ಆಡಳಿತ ಮಂಡಳಿ ಸದಸ್ಯರ ವಿರುದ್ಧ ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಅಡಿಯಲ್ಲಿ ಪ್ರಕರಣ ದಾಖಲಿಸಬಹುದು. ಈ ತಪ್ಪಿಗೆ ಗರಿಷ್ಠ ಮೂರು ವರ್ಷ ಶಿಕ್ಷೆ ವಿಧಿಸಲು ಅವಕಾಶ ಇದೆ.

1956ರ ಯುಜಿಸಿ ಕಾಯ್ದೆಯನ್ನು ರದ್ದುಪಡಿಸಿ ಎಚ್‌ಇಸಿಐ ಸ್ಥಾಪಿಸುವ ಮಸೂದೆಯ ಕರಡನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಚ್‌ಆರ್‌ಡಿ) ಸಿದ್ಧಪಡಿಸಿದೆ. ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದು ಯುಜಿಸಿಯನ್ನು ರದ್ದುಪಡಿಸುವುದರ ಹಿಂದಿನ ಉದ್ದೇಶ ಎಂದು ಹೇಳಲಾಗಿದೆ.

ರಾಜ್ಯ ಮತ್ತು ಕೇಂದ್ರದ ಶಾಸನಗಳ ಮೂಲಕ ಸ್ಥಾಪನೆಯಾದ ಎಲ್ಲ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನ ಹೊಂದಿರುವ ಸಂಸ್ಥೆಗಳಿಗೆ ಎಚ್‌ಇಸಿಐ ಅನ್ವಯ ಆಗಲಿದೆ.

### ಪ್ರಸ್ತಾವಗಳು

- ಭಾರತೀಯ ಸಾಗರೋತ್ತರ ಪೌರರನ್ನು ಅಧ್ಯಕ್ಷರನ್ನಾಗಿಸಲು ಅವಕಾಶ
- ಎಚ್‌ಇಸಿಐ ಅಧ್ಯಕ್ಷರನ್ನು ನೇಮಿಸುವುದು ಕೇಂದ್ರ ಸರ್ಕಾರದ ಅಧಿಕಾರ
- ಸಮಿತಿಯಲ್ಲಿ ಉಪಾಧ್ಯಕ್ಷರು ಮತ್ತು ಇತರ 12 ಸದಸ್ಯರಿರುತ್ತಾರೆ




ಯುಜಿಸಿ

**ಸದಸ್ಯತ್ವ**

ವಿವರ: ಎಚ್‌ಆರ್‌ಡಿ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಗಳು ಎಚ್‌ಇಸಿಐನಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವ ಸದಸ್ಯರಾಗಿರುತ್ತಾರೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪರಿಷತ್‌ನ ಅಧ್ಯಕ್ಷರು ನಿಯಂತ್ರಣ ಸಂಸ್ಥೆಗಳ ಪ್ರತಿನಿಧಿಗಳು ಎಂಬ ಕಾರಣಕ್ಕೆ ಸದಸ್ಯತ್ವ ಪಡೆಯುತ್ತಾರೆ. ಶಿಕ್ಷಣ ಗುಣಮಟ್ಟದ ಮಾನ್ಯತೆಯ ಎರಡು ಸಂಸ್ಥೆಗಳ ಮುಖ್ಯಸ್ಥರನ್ನೂ ಸದಸ್ಯರನ್ನಾಗಿ ಮಾಡಲಾಗುತ್ತದೆ.

ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಇಬ್ಬರು ಕುಲಪತಿಗಳು, ಇಬ್ಬರು ಪ್ರಾಧ್ಯಾಪಕರು ಮತ್ತು ಉದ್ಯಮದ ಹಿರಿಯರೊಬ್ಬರು ಸದಸ್ಯರಲ್ಲಿ ಸೇರಿರುತ್ತಾರೆ.

ಎಚ್‌ಇಸಿಐಗೆ ಸಲಹಾ ಪರಿಷತ್ತು ಇರುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ. ರಾಜ್ಯಗಳ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷರು ಸಲಹಾ ಪರಿಷತ್ ಸದಸ್ಯರಾಗಿರುತ್ತಾರೆ.

### ಶೋಧ ಸಮಿತಿ

ಸಂಪುಟ ಕಾರ್ಯದರ್ಶಿ ನೇತೃತ್ವದ ಶೋಧ ಮತ್ತು ಆಯ್ಕೆ ಸಮಿತಿಯು ಎಚ್‌ಇಸಿಐ ಅಧ್ಯಕ್ಷ ಸ್ಥಾನಕ್ಕೆ ಹೆಸರುಗಳನ್ನು ಶಿಫಾರಸು ಮಾಡಲಿದೆ. ಉಪಾಧ್ಯಕ್ಷರ ಹುದ್ದೆಗೂ ಈ ಸಮಿತಿಯೇ ಹೆಸರುಗಳನ್ನು ಶಿಫಾರಸು ಮಾಡಲಿದೆ. ಆದರೆ, ಉಪಾಧ್ಯಕ್ಷ ಹುದ್ದೆಗೆ ಹೆಸರು ಶಿಫಾರಸು ಮಾಡುವ ಸಮಿತಿಯಲ್ಲಿ ಎಚ್‌ಇಸಿಐ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

### ಜನರ ಸಲಹೆ, ಸೂಚನೆಗೆ ಅವಕಾಶ

ಕರಡು ಮಸೂದೆಯ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವಂತೆ ಶಿಕ್ಷಣ ತಜ್ಞರು ಮತ್ತು ಇತರರಿಗೆ ಎಚ್‌ಆರ್‌ಡಿ ಸಚಿವ ಪ್ರಕಾಶ್ ಜಾವಡೇಕರ್ ಮನವಿ ಮಾಡಿದ್ದಾರೆ.

ಜುಲೈ 7ರಂದು ಸಂಜೆ 5 ಗಂಟೆಯವರೆಗೆ ಸಲಹೆ, ಸೂಚನೆಗಳನ್ನು ನೀಡಲು ಅವಕಾಶ ಇದೆ ಎಂದು ಸರಣಿ ಟ್ವೀಟ್‌ಗಳ ಮೂಲಕ ಜಾವಡೇಕರ್ ತಿಳಿಸಿದ್ದಾರೆ.

SDUAHER

ಸಂಯುಕ್ತ ಕರ್ನಾಟಕ

# ಮಧುಮೇಹ ಕುರಿತು ನಾಳೆ ಕನ್ನಡ ಸಂವಾದ

**ಸಂ.ಕ ಸಮಾಚಾರ ಕೋಲಾರ**

ಜೂ.29 ರಂದು ಬೆಳಗ್ಗೆ 8.30ಕ್ಕೆ ಸಮಗ್ರ ಮಧುಮೇಹ ಚಿಕಿತ್ಸೆ ಕುರಿತಾದ ಸಮನ್ವಯ-2018 ಸಮ್ಮೇಳನವನ್ನು ಟಮಕದ ಮೆಡಿಕಲ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ ಮಧುಮೇಹ ತಜ್ಞ ಡಾ.ಎಸ್.ಎಸ್.ಶ್ರೀಕಂಠ ಮುಖ್ಯ ಭಾಷಣ ಮಾಡಲಿದ್ದು ಕಾರ್ಯಕ್ರಮದ ಅಂತ್ಯದಲ್ಲಿ ಕನ್ನಡದಲ್ಲಿ ಸಂವಾದ ನಡೆಯಲಿರುವುದರಿಂದಾಗಿ ಸಾರ್ವಜನಿಕರೂ ಭಾಗವಹಿಸಿ ಸಕ್ಕರೆ ಕಾಯಿಲೆ ಕುರಿತಾದ ಸಂದೇಹಗಳನ್ನು ನಿವಾರಿಸಿಕೊಳ್ಳಬಹುದೆಂದು ಹೇಳಿದರು.

ಉದಯವಾಣಿ



# ಜಾಲಪ್ಪ ಆಸ್ಪತ್ರೆಯಲ್ಲಿ ಮಾದಕ ವಸ್ತು ತಡೆ ದಿನ




**ಕೋಲಾರ:** ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಮನೋವೈದ್ಯಕೀಯ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ವಿಶ್ವಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟುವ ದಿನಾಚರಣೆ ನಡೆಯಿತು. ಜಾಲಪ್ಪ ಆಸ್ಪತ್ರೆಯ ಕುಲಪತಿ ಎಸ್.ಕುಮಾರ್, ಉಪ ಕುಲಪತಿ ಸಿ.ವಿ ರಘುವೀರ್, ವೈದ್ಯಕೀಯ ಅಧೀಕ್ಷಕ ಡಾ.ವಿ ಲಕ್ಷ್ಮಯ್ಯ, ಮನೋವೈದ್ಯ ಡಾ.ಮೋಹನರೆಡ್ಡಿ ಮಾತನಾಡಿ, ಈ ದಿನದ ವಿಶೇಷತೆ, ಮಾದಕ ವ್ಯಸನಕ್ಕೆ ತುತ್ತಾಗಿರುವವರನ್ನು ಹೊರತರುವ ಹಾಗೂ ವ್ಯಸನಕ್ಕೆ ಒಳಗಾಗದಂತೆ ಸಾರ್ವಜನಿಕರಿಗೆ ತಿಳಿವಳಿಕೆಯನ್ನು ನೀಡಿದರು. ಈ ವೇಳೆ ಮನೋವೈದ್ಯ ವಿಭಾಗದ ಎಲ್ಲಾ ಬೋಧಕ ವರ್ಗ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಜಗದೀಶ್, ಎನ್‌ಎಸ್‌ಎಸ್ ವೈದ್ಯಕೀಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿಜಯವಾಣಿ



# ನಾಳೆ ಮಧುಮೇಹ ಚಿಕಿತ್ಸೆ ಸಮನ್ವಯ ಸಮ್ಮೇಳನ

## ಉಪಕುಲಪತಿ ಡಾ.ರಘುವೀರ್ ಮಾಹಿತಿ | ಆಯುಷ್ ಚಿಕಿತ್ಸಾ ವಿಧಾನ ತಿಳುವಳಿಕೆ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ ಜೂ 29ರಂದು ಸಮನ್ವಯ-2018 ಸಮ್ಮೇಳನವನ್ನು ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

» 320ಕ್ಕೂ ಹೆಚ್ಚು ಗಣ್ಯರು ಭಾಗವಹಿಸುವ ನಿರೀಕ್ಷೆ

ಸಮಗ್ರ ಮಧುಮೇಹ ಚಿಕಿತ್ಸೆಗೆ ಸಂಬಂಧಿಸಿದ ಸಮ್ಮೇಳನ ಇದಾಗಿದ್ದು, ಮಧುಮೇಹ ಚಿಕಿತ್ಸಾ ಪರಿಣಿತರು ಭಾಗವಹಿಸಿ ಮಧುಮೇಹಿಗಳ ಜೀವನಶೈಲಿಯಲ್ಲಿ ಬದಲಾವಣೆ ಕ್ರಮ, ಆಯುಷ್, ಯೋಗ, ಯುನಾನಿ, ಅಲೋಪಥಿ ಚಿಕಿತ್ಸಾ ವಿಧಾನದ ಮೂಲಕ ಮಧುಮೇಹ ನಿಯಂತ್ರಿಸುವ ಕ್ರಮ ತಿಳಿಸಿಕೊಡಲಿದ್ದಾರೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿಜಯವಾಣಿ



ಕೋಲಾರದ ಪತ್ರಕರ್ತರ ಭವನದಲ್ಲಿ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಉಪಕುಲಪತಿ ಡಾ.ಸಿ.ವಿ.ರಘುವೀರ್ ಸಮನ್ವಯ ಸಮ್ಮೇಳನದ ಕುರಿತು ಮಾಹಿತಿ ನೀಡಿದರು. ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ, ಸಮಗ್ರ ವೈದ್ಯಕೀಯ ವಿಭಾಗದ ವೈದ್ಯ ಡಾ. ಪ್ರಭಾಕರ್ ಹಾಜರಿದ್ದರು.

ಜೂ.29ರ ಬೆಳಗ್ಗೆ 8.30ಕ್ಕೆ ಮಧುಮೇಹ ಚಿಕಿತ್ಸಾ ಪರಿಣಿತ ಬೆಂಗಳೂರಿನ ಸಮತ್ವಮ್ ಡಯಾಬೀಟಿಸ್ ಎಂಡೋಕಾರಿನೋಲಾಜಿ ವಿಭಾಗದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್. ಶ್ರೀಕಂಠಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಸಂಸ್ಥೆ ಕುಲಾಧಿಪತಿ ಡಾ. ಎಸ್. ಕುಮಾರ್ ಅಧ್ಯಕ್ಷತೆ ವಹಿಸುವರು. ಸಮ್ಮೇಳನದಲ್ಲಿ ಪ್ರಬಂಧ ಮಂಡನೆ ಇರುತ್ತದೆ. 320ಕ್ಕೂ ಹೆಚ್ಚು ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ ಮಾತನಾಡಿ, ಜಿಲ್ಲೆಯ ಜನಸಂಖ್ಯೆಯಲ್ಲಿ ಸರಾಸರಿ ಶೇ.10ರಿಂದ 15 ಮಂದಿ ಮಧುಮೇಹದ ಪೂರ್ವಹಂತ ಹಾಗೂ ಮಧುಮೇಹ ಬಾಧಿಸಿರುವವರಿದ್ದಾರೆ. ಆರಂಭ ಹಂತದಲ್ಲೇ ಪತ್ತೆ ಹಚ್ಚಿದರೆ ಹೆಚ್ಚಿನ ಹಾನಿ ತಡೆಯಬಹುದು ಎಂದರು.

ಸಮಗ್ರ ವೈದ್ಯಕೀಯ ವಿಭಾಗದ ವೈದ್ಯ ಡಾ. ಪ್ರಭಾಕರ್ ಮಾತನಾಡಿದರು.

ವಿಜಯವಾಣಿ



# ಮಾದಕ ವಸ್ತು ವಿರೋಧಿ ದಿನ

ಕೋಲಾರ: ಆರ್.ಎಲ್. ಜಾಲಪ್ಪ ಆಸ್ಪತ್ರೆ ಮನೋ ವೈದ್ಯಕೀಯ ವಿಭಾಗದಿಂದ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ಮಾದಕ ವಸ್ತುಗಳ ವಿರೋಧಿ ದಿನವನ್ನು ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ಮಂಗಳವಾರ ಹಮ್ಮಿಕೊಂಡಿತ್ತು. ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕುಲಪತಿ ಎಸ್.ಕುಮಾರ್, ಉಪ ಕುಲಪತಿ ಸಿ.ವಿ ರಘುವೀರ್, ವೈದ್ಯಕೀಯ ಅಧೀಕ್ಷಕ ಡಾ.ವಿ ಲಕ್ಷ್ಮಯ್ಯ, ಮನೋವೈದ್ಯ ಡಾ.ಮೋಹನರೆಡ್ಡಿ ಮಾದಕ ವ್ಯಸನಕ್ಕೆ ತುತ್ತಾಗಿರುವವರನ್ನು ಹೊರತರುವ ಹಾಗೂ ವ್ಯಸನಕ್ಕೆ ಒಳಗಾಗದಂತೆ ಸಾರ್ವಜನಿಕರಿಗೆ ತಿಳಿವಳಿಕೆ ನೀಡಿದರು. ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಜಗದೀಶ್ ಇತರರಿದ್ದರು.

ಕೋಲಾರಪತ್ರಿಕೆ

# ಮಾದಕ ವಸ್ತು ಸೇವನೆ ವಿರೋಧಿ ದಿನಾಚರಣೆ




ಕೋಲಾರ ಜೂ ೨೭– ಆರ್.ಎಲ್. ಜಾಲಪ್ಪ ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ವಿಶ್ವಮಾದಕ ವಸ್ತುಗಳ ಅನಧಿಕೃತ ಬಳಕೆಯನ್ನು ತಡೆಗಟ್ಟುವ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ಎಸ್.ಕುಮಾರ್, ಉಪ ಕುಲಪತಿ ಸಿ.ವಿ ರಘುವೀರ್, ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ|| ವಿ ಲಕ್ಷ್ಮಯ್ಯ, ಮನೋವೈದ್ಯ ಡಾ|| ಮೋಹನರೆಡ್ಡಿ ಮಾತನಾಡಿ ದಿನದ ವಿಶೇಷವನ್ನು ವಿವರಿಸಿ ಮಾದಕ ವ್ಯಸನಕ್ಕೆ ತುತ್ತಾಗಿರುವವರನ್ನು ಹೊರತರುವ ಹಾಗೂ ವ್ಯಸನಕ್ಕೆ ಒಳಗಾಗದಂತೆ ಸಾರ್ವಜನಿಕರಿಗೆ ತಿಳಿವಳಿಕೆ ನೀಡಿದರು.

ಮನೋವೈದ್ಯ ವಿಭಾಗದ ಎಲ್ಲಾ ಬೋಧಕ ವರ್ಗ, ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಜಗದೀಶ್, ಎನ್ನೆಸ್ಸೆಸ್ ವಿದ್ಯಾರ್ಥಿಗಳಿದ್ದರು.

ಕೋಲಾರಪತ್ರಿಕೆ

# ಮಧುಮೇಹ ಜಾಗೃತಿಗಾಗಿ ನಾಳೆ ವಿಶೇಷ ಸಮ್ಮೇಳನ

ಕೋಲಾರ ಜೂ ೨೭

ದೇಶದಲ್ಲಿ ಹೆಚ್ಚುತ್ತಿರುವ ಸಕ್ಕರೆ ಕಾಯಿಲೆಯ ಬಗ್ಗೆ ಜನ ಜಾಗೃತಿ ಮೂಡಿಸಲು ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸಮನ್ವಯ–೨೦೧೮ ಶೀರ್ಷಿಕೆಯಲ್ಲಿ ಸಮಗ್ರ ಮಧುಮೇಹ ಚಿಕಿತ್ಸೆ ಕುರಿತ ಸಮ್ಮೇಳನವನ್ನು ಜೂನ್ ೨೯ರಂದು ಏರ್ಪಡಿಸಲಾಗಿದೆಯೆಂದು ಉಪಕುಲಪತಿ ಡಾ॥ ಸಿ.ವಿ. ರಘುವೀರ್ ಅವರು ಪ್ರಕಟಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉಪಕುಲಪತಿಗಳು ಬೆಂಗಳೂರು ತಮತ್ವವ್ ಡಯಾಬಿಟೀಸ್ ಎಂಡೋಕ್ರೈನಾಲಿಜಿ ಸೆಂಟರ್‌ನ ವೈದ್ಯಕೀಯ ನಿರ್ದೇಶಕ ಡಾ॥ ಎಸ್.ಎಸ್. ಶ್ರೀಕಂಠ ಅವರು ಕುಲಾಧಿಪತಿ ಡಾ॥ ಎಸ್. ಕುಮಾರ್ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿ, ಆಶಯ ಭಾಷಣ ಮಾಡುವರು ಎಂದು ನುಡಿದರು.

ಮಧುಮೇಹವನ್ನು ಕೇವಲ ಆಲೋಪತಿಯಿಂದಲೇ ತಡೆಯಲಾಗುವುದಿಲ್ಲ. ಇದಕ್ಕೆ ಪೂರಕವಾಗಿ ಜೀವನ, ಆಹಾರ ಶೈಲಿ ಬದಲಾಗಬೇಕು. ಯೋಗ, ಆಯುಷ್ ಚಿಕಿತ್ಸೆಗಳು ನೆರವಾಗಲಿದೆ. ಈ ಎಲ್ಲಾ ವಿಚಾರಗಳು ಸಮ್ಮೇಳನದಲ್ಲಿ ಚರ್ಚಿತವಾಗಲಿದೆ ಎಂದು ಉಪ ಕುಲಪತಿಗಳು ತಿಳಿಸಿದರು.

ಪಾಂಡಿಚೇರಿಯಲ್ಲಿ ಶ್ರೀ ಬಾಲಾಜಿ ವಿದ್ಯಾಪೀಠದ ಡಾ॥ ಆನಂದ್ ಬಾಲಯೋಗಿ, ದಕ್ಷಿಣ ಕನ್ನಡದ ಸುಶ್ರುತಾ ಆಯುರ್ವೇದ ಆಸ್ಪತ್ರೆಯ ಡಾ॥ ರವಿ ಶಂಕರ್ ಪರ್ವಾಜೆ, ಎಂಎಸ್ ಆರ್ ಕಾಲೇಜಿನ ಡಾ॥ ಜಿ.ಜಿ. ಗಂಗಾಧರನ್, ತಿರುಪತಿಯ ಹರ್ಷಿತ ಆಸ್ಪತ್ರೆಯ ಡಾ॥ ಕೃಷ್ಣ ಪ್ರಶಾಂತಿ ಹಾಗೂ ಸ್ಥಳೀಯ ವೈದ್ಯರಾದ ಡಾ॥ ಲಕ್ಷ್ಮಯ್ಯ, ಡಾ॥ ಪ್ರಭಾಕರ್, ಡಾ॥ ನಿತಿನ್ ಪಾಟೀಲ್ ಪಾಲ್ಗೊಳ್ಳುವರು.

ಪಟ್ಟಣ ಪ್ರದೇಶಗಳಲ್ಲಿ ಸಕ್ಕರೆ ಕಾಯಿಲೆ ಜಾಸ್ತಿಯಾಗುತ್ತಿದ್ದು, ಅದನ್ನು ತಡೆಗಟ್ಟುವುದು ಮುಖ್ಯವಾಗಿದೆಯೆಂದೂ, ಜಾಲಪ್ಪ ಆಸ್ಪತ್ರೆ ನಗರಕೇಂದ್ರದಲ್ಲಿ ೧೨೦೦ಕ್ಕೂ ಹೆಚ್ಚು ಮಧುಮೇಹಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆಂದೂ, ಸಾರ್ವಜನಿಕರು ಸಮ್ಮೇಳನದಲ್ಲಿ ಭಾಗವಹಿಸಿ ಮಾಹಿತಿ ಪಡೆಯಬಹುದೆಂದೂ ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ॥ ಲಕ್ಷ್ಮಯ್ಯ ತಿಳಿಸಿದರು.

## ನೆಲಬಾಂಬ್ ಸ್ಫೋಟ; ೭ ಪೊಲೀಸರು ಮೃತ

ನವದೆಹಲಿ ಜೂ ೨೭

ಜಾರ್ಖಂಡ್ ರಾಜ್ಯದ ಗರ್ವಾ ಜಿಲ್ಲೆಯಲ್ಲಿ ನಕ್ಸಲೀಯರು ನೆಲಬಾಂಬ್ ಸಿಡಿಸಿದ್ದರಿಂದ ಏಳು ಮಂದಿ ಪೊಲೀಸರು ಹತರಾಗಿದ್ದು, ಮೂವರು ಗಾಯಗೊಂಡಿದ್ದಾರೆ.

ಈ ಘಟನೆಯ ಬಳಿಕ ನಕ್ಸಲೀಯರ ಶೋಧನಾ ಕಾರ್ಯ ಮುಂದುವರೆಯಿತು.